O.S.No.:58/2021

PW.:1

**ದಿಃ 23-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ Sri. SBH ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರಸ್ತುತ ದಾವೆ ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳನ್ನು ನಾನು ಓದಿ ಸಹಿ ಮಾಡಿರುತ್ತೇನೆ. ಪ್ರಸ್ತುತ ದಾವೆಯನ್ನು ಒಂದು ಆಸ್ತಿಗಾಗಿ ಮಾಡಿದ್ದು ಅದರ GPC No.192/ಸಿ ಆಗಿದ್ದು, 20 ಗುಂಟೆ ಕ್ಷೇತ್ರ ಇರುತ್ತದೆ. ದಾವಾ ಆಸ್ತಿ 20 ಗುಂಟೆ ಕ್ಷೇತ್ರ ಇರುವುದನ್ನು ನನ್ನ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿರುವುದಿಲ್ಲ. ದಾವಾ ಆಸ್ತಿ 20 ಗುಂಟೆ ಕ್ಷೇತ್ರ ಇರುವುದನ್ನು ನಾನು ಸರ್ವೇಯ ಆಧಾರದ ಮೇಲೆ ಹೇಳಿರುತ್ತೇನೆ. ದಾವಾ ಆಸ್ತಿಯನ್ನು ಸುಮಾರು 2 ವರ್ಷಗಳ ಹಿಂದೆ ಸರ್ವೇ ಮಾಡಲಾಗಿರುತ್ತದೆ ಅಂದರೆ ಪ್ರಸ್ತುತ ದಾವೆ ಸಲ್ಲಿಸುವ ಮುಂಚೆಯೇ ಸರ್ವೇ ಆಗಿರುತ್ತದೆ. ದಾವಾ ಆಸ್ತಿ ಸರ್ವೇ ಆಗಿರುವುದಕ್ಕೆ ದಾವೆ ಸಲ್ಲಿಸುವಾಗ ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿ ಸರ್ವೇ ಆಗಿರುವ ಬಗ್ಗೆ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿರುವುದಿಲ್ಲ. ದಾವಾ ಆಸ್ತಿ ಸರ್ವೇ ಆಗಿರುವ ಬಗ್ಗೆ ನಕಾಶೆ ಇದ್ದು ಅದನ್ನು ನ್ಯಾಕ್ಕೆ ಸಲ್ಲಿಸಿರುತ್ತೇನೆ.

ದಾವಾ ಆಸ್ತಿ ಚೆಕ್ ಬಂದಿ ಪೂರ್ವಕ್ಕೆ - ಸರ್ವೇ ನಂ.22 ಜಮೀನು, ಪಶ್ಚಿಮಕ್ಕೆ - ಸರಕಾರಿ ರಸ್ತೆ, ದಕ್ಷಿಣಕ್ಕೆ - ನನಗೆ ಸೇರಿದ ಖುಲ್ಲಾ ಜಾಗ ಸಂಖ್ಯೆ 192/ಬಿ ಇರುತ್ತದೆ, ಉತ್ತರಕ್ಕೆ - ರಸ್ತೆ ಇರುತ್ತದೆ. ಖುಲ್ಲಾ ಜಾಗ ಸಂಖ್ಯೆ 192/ಬಿ ಅಂದಾಜು 7-8 ಗುಂಟೆ ವಿಸ್ತೀರ್ಣ ಇರಬಹುದು, ಸದರಿ ಜಾಗದ ಉತಾರ ಶ್ರೀಕಾಂತ ಚೌರಡ್ಡಿ ಎಂಬುವವರ ಹೆಸರಿನಲ್ಲಿ ಇರುತ್ತದೆ. ಸದರಿ ಜಾಗ ಶ್ರೀಕಾಂತ ಚೌರಡ್ಡಿ ಎಂಬುವವರ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸರಿ. ಬಿನ್ ಶೇತ್ಕಿ ಜಾಗಕ್ಕೆ ಮಾತ್ರ ಪಂಚಾಯತಿ ಇಂದ ನಂ. ಸಿಗುತ್ತದೆ ಎಂದರೆ ಸರಿ. ದಾವಾ ಆಸ್ತಿ ಬಿನ್ ಶೇತ್ಕಿ ಇರುವುದಿಲ್ಲ.

ದಾವಾ ಆಸ್ತಿ 192/ಸಿ ನಂ. ಬರುವುದಕ್ಕಿಂತ ಮುಂಚೆ ಅಖಂಡ 192 ಎಂದು ನಂಬರ ಇತ್ತು ಎಂದರೆ ಸರಿ. 192 ಪೂರ್ತಿ ಜಾಗ ಗ್ರಾಮ ಠಾಣಾ ಜಾಗೆ ಎಂದರೆ ಸರಿ. 192 ಪೂರ್ತಿ ಜಾಗದ ಒಟ್ಟು ಕ್ಷೇತ್ರ ನನಗೆ ನೆನಪಿರುವುದಿಲ್ಲ. 192 ಪೂರ್ತಿ ಜಾಗವನ್ನು ವಿಭಾಗಗಳನ್ನಾಗಿ ನಾವು ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ಮಾಡಿರುತ್ತಾರೆ. ನನಗೆ ಗ್ರಾಮ ಠಾಣಾ ಜಾಗವನ್ನು ಪಂಚಾಯತಿಯರು ಮಂಜೂರು ಮಾಡಿರುವುದಿಲ್ಲ. 1984 ರಲ್ಲಿ 192 ಪೂರ್ತಿ ಜಾಗ ನನ್ನ ಹೆಸರಿನಲ್ಲಿ ಇತ್ತು. 192 ಪೂರ್ತಿ ಜಾಗ ನನ್ನ ಹಿರಿಯರಿಂದ ಬಂದ

ಆಸ್ತಿ ಆಗಿರುತ್ತದೆ. 192 ಪೂರ್ತಿ ಜಾಗ ಸುಮಾರು 50-60 ವರ್ಷಗಳಿಂದಲೂ ನಮ್ಮ ಹಿರಿಯರಿಂದ ಬಂದ ಆಸ್ತಿಯಾಗಿರುತ್ತದೆ. ಅವರಾದಿ ಗ್ರಾಮದಲ್ಲಿ ನಾನು ಹುಟ್ಟುವ ಮುಂಚೆಯಿಂದ ಗ್ರಾಮ ಪಂಚಾಯತಿ ಆಗಿರುತ್ತದೆ. ಈಗ ನನಗೆ 60 ವರ್ಷ ವಯಸ್ಸು ಇರುತ್ತದೆ. 192 ಪೂರ್ತಿ ಜಾಗ ನಮ್ಮ ಹಿರಿಯರಿಂದ ಬಂದಿದ್ದು ಎಂದು ಹೇಳಿದ್ದು 60 ವರ್ಷದ ಪಂಚಾಯತಿ ದಾಖಲಾತಿಗಳನ್ನು ನ್ಯಾಕ್ಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. 192 ಪೂರ್ತಿ ಜಾಗ ನಮ್ಮ ಹಿರಿಯರಿಂದ ಬಂದಿದ್ದು ಎಂದು ತೋರಿಸಲು ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ, 192 ಪೂರ್ತಿ ಜಾಗ ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು. 192 ಪೂರ್ತಿ ಜಾಗ ನನ್ನ ತಂದೆಯ ಹೆಸರಿನಲ್ಲಿ ನ್ಯಾಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆ 2002 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ನಾವು 4 ಜನ ಹೆಣ್ಣು ಮಕ್ಕಳು 4 ಜನ ಗಂಡು ಮಕ್ಕಳು ಇದ್ದು ನನ್ನ ತಾಯಿ ಜೀವಂತ ಇರುತ್ತಾಳೆ. ನನ್ನ ತಂದೆಯ ಮರಣಾ ನಂತರ 192 ಪೂರ್ತಿ ಜಾಗ ನಮ್ಮ ಹೆಸರಿಗೆ ವಾರಸಾ ಮಾಡಲು ಗ್ರಾಮ ಪಂಚಾಯತಿಗೆ ನಾವು ಅರ್ಜಿ ಸಲ್ಲಿಸಿರುತ್ತೇವೆ. ಅದಕ್ಕೆ ಸಂಬಂಧಿಸಿದ ಸ್ವೀಕೃತಿಯನ್ನು ಪಡೆದುಕೊಂಡಿರುವುದಿಲ್ಲ.

ಸಾಮಾನ್ಯವಾಗಿ ವಾರಸಾ ಮಾಡಲು ಪಂಚಾಯತಿಯವರು ನಾವು ಸಲ್ಲಿಸಿದ ಅರ್ಜಿ ಆಧಾರದ ಮೇಲೆ ಪಂಚಾಯತಿಯಲ್ಲಿ ಠರಾವು ಪಾಸ ಮಾಡುತ್ತಾರೆ ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ ವಾರಸಾ ಪ್ರಕಾರ ನಮ್ಮ ಹೆಸರು ನಮೂದು ಮಾಡಲು ಪಂಚಾಯತಿಗೆ ಅರ್ಜಿ ಸಲ್ಲಿಸಿದ ದಿನಾಂಕ ನನಗೆ ನೆನಪಿರುವುದಿಲ್ಲ. 192 ಪೂರ್ತಿ ಜಾಗ ನಮ್ಮ ಹೆಸರಿಗೆ ವಾರಸಾ ಮಾಡಲು ಗ್ರಾಮ ಪಂಚಾಯತಿಯವರು 1984 ರಲ್ಲಿ ಠರಾವು ಪಾಸ ಮಾಡಿರುತ್ತಾರೆ. ಗ್ರಾಮ ಪಂಚಾಯತಿಯವರು ಠರಾವು ಮಾಡಿದ ಬಗ್ಗೆ ದಾಖಲಾತಿಗಳನ್ನು ನ್ಯಾಕ್ಕೆ ಹಾಜರುಪಡಿಸಿರುತ್ತೇನೆ. 192 ಪೂರ್ತಿ ಜಾಗ ಎ ಬಿ ಸಿ ಡಿ ಎಂದು ವಿಭಾಗ ಆಗಿದೆ ಎಂದು ಹೇಳಿದ್ದು ವಿಭಾಗ ಮಾಡಲು ನಾವು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿರುತ್ತೇವೆ, ಹಾಗೆ ಅರ್ಜಿ ಸಲ್ಲಿಸಿದ ದಿನಾಂಕ ನನಗೆ ನೆನಪಿರುವುದಿಲ್ಲ ಮತ್ತು ಯಾವುದೇ ಸ್ವೀಕೃತಿ ಪಡೆದುಕೊಂಡಿರುವುದಿಲ್ಲ. ಹಾಗೆಯೇ ಗ್ರಾಮ ಪಂಚಾಯತಿಗೆ ಸಲ್ಲಿಸಿದ ಅರ್ಜಿಗೆ ನಾನು ಮಾತ್ರ ಸಹಿ ಮಾಡಿರುತ್ತೇನೆ. 192 ಪೂರ್ತಿ ಜಾಗ ಎ ಬಿ ಸಿ ಡಿ ಎಂದು ವಿಭಾಗ ಮಾಡಲು ಗ್ರಾಮ ಪಂಚಾಯತಿಯಿಂದ ಠರಾವು ಪಾಸ ಮಾಡಬೇಕಾಗುತ್ತದೆ ಎಂದರೆ ಸರಿ. 192 ಪೂರ್ತಿ ಜಾಗ ಎ ಬಿ ಸಿ ಡಿ ಎಂದು ವಿಭಾಗ ಮಾಡಿದ ದಿನಾಂಕ ನನಗೆ ನೆನಪಿರುವುದಿಲ್ಲ. ಅದಕ್ಕೆ ಸಂಬಂಧಿಸಿದ ಠರಾವನ್ನು ನ್ಯಾ. ಕ್ಕೆ ಹಾಜರುಪಡಿಸಿರುವುದಿಲ್ಲ.

ನಿಪಿ-1 ದಾಖಲಾತಿಯಲ್ಲಿ ಠರಾವು ಪಾಸ ಮಾಡಿರುವ ಬಗ್ಗೆ ಶರಾದಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ, ನಿಪಿ- 1 ದಾಖಲಾತಿಯಲ್ಲಿ ಠರಾವು ಪಾಸ ಮಾಡಿರುವ ಬಗ್ಗೆ ಶರಾದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-1 ದಾಖಲಾತಿಯಲ್ಲಿ ದಾವಾ ಆಸ್ತಿ 192/ಸಿ ಒಟ್ಟು ಕ್ಷೇತ್ರ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ವಾದ ಪತ್ರದ ಒಂದನೇ ಖಂಡಿಕೆಯಲ್ಲಿ ದಾವಾ ಆಸ್ತಿಯ ಒಟ್ಟು ಕ್ಷೇತ್ರ

2370.87 Sq. mtrs ಎಂದು ನಮೂದಾಗಿದ್ದು ಅದನ್ನು ಯಾವ ಆಧಾರದ ಮೇಲೆ ನಮೂದು ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸರ್ವೇಯರ ನೀಡಿದ ವರದಿಯ ಆಧಾರದ ಮೇಲೆ ನಮೂದು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸರ್ವೇಯನ್ನು ಸುಮಾರು 2-3 ವರ್ಷಗಳ ಹಿಂದೆ ಮಾಡಿರುತ್ತಾರೆ. ಸರ್ವೇ ಮಾಡಲು ನಾನೇ ಅರ್ಜಿ ಸಲ್ಲಿಸಿರುತ್ತೇನೆ, ಅದಕ್ಕೆ ಸಂಬಂಧಿಸಿದ ದಾಖಲಾತಿ ನನ್ನ ಹತ್ತಿರ ಇರುತ್ತದೆ. ಸರ್ವೇ ಮಾಡಲು ನಾನು ಅರ್ಜಿ ಸಲ್ಲಿಸಿದ್ದೇನೆ ಎಂದು ಹೇಳಿದ್ದು ಅರ್ಜಿಯ ಸ್ವೀಕೃತಿ ಪತ್ರ ಮತ್ತು  ಸರ್ವೇ ವರದಿಯನ್ನು ನ್ಯಾಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-5 ನಾನು ಸಲ್ಲಿಸಿದ ಅರ್ಜಿಯ ರಸೀದಿಯಾಗಿದ್ದು, ನಿಪಿ-6 ಮೋಜಣಿ ಸ್ವತ್ತಿಗೆ ಸಂಬಂಧಪಟ್ಟ ವಿವರ ಆಗಿರುತ್ತದೆ ಎಂದರೆ ಸರಿ. ನಿಪಿ-5 ಮತ್ತು 6 ರಲ್ಲಿ  ದಾವಾ ಆಸ್ತಿಯ ಒಟ್ಟು ಕ್ಷೇತ್ರ 2370.87 Sq. mtrs ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು ನಕಾಶೆಯಲ್ಲಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-7 ನಕಾಶೆಯಲ್ಲಿ 192/ಸಿ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-14 ರಲ್ಲಿ ಆಸ್ತಿಯ ಸಂಖ್ಯೆ ವಿಪಿಸಿ ನಂ.192 ಎಂದು ತೋರಿಸಿದ್ದು 200X 200 ಎಂದು ನಮೂದಾಗಿರುತ್ತದೆ ಎಂದರೆ ಸರಿ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.